ಕರ್ನಾಟಕ ಸರ್ಕಾರ

**ಮೇ 14, 2017**

# ಕರ್ನಾಟಕ ಮಾಧ್ಯಮ ಅಕಾಡೆಮಿಯ ಮಾಜಿ ಅಧ್ಯಕ್ಷ ಗರುಡನಗಿರಿ ನಾಗರಾಜ ಹಾಗೂ ಭಾರತದ ನಾಲ್ಕು ಪ್ರಧಾನ ಮಂತ್ರಿಗಳಿಗೆ ಮಾಧ್ಯಮ ಸಲಹೆಗಾರರಾಗಿದ್ದ ರಾಮಮೋಹನ್ ರಾವ್ ಅವರ ನಿಧನಕ್ಕೆ ಮುಖ್ಯಮಂತ್ರಿ ಶೋಕ

**ಬೆಂಗಳೂರು, ಮೇ 14:**

ಕರ್ನಾಟಕ ಮಾಧ್ಯಮ ಅಕಾಡೆಮಿಯ ಮಾಜಿ ಅಧ್ಯಕ್ಷ ಗರುಡನಗಿರಿ ನಾಗರಾಜ ಹಾಗೂ ಭಾರತದ ನಾಲ್ಕು ಪ್ರಧಾನ ಮಂತ್ರಿಗಳಿಗೆ ಮಾಧ್ಯಮ ಸಲಹೆಗಾರರಾಗಿದ್ದ ರಾಮಮೋಹನ್ ರಾವ್ ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ವೃತ್ತಿ ಜೀವನದ ಬಹುಭಾಗವನ್ನು ವರದಿಗಾರಿಕೆಯಲ್ಲೇ ಕಳೆದ ಗರುಡನಗಿರಿ ನಾಗರಾಜ ಅವರು ತಮ್ಮ ಮೃದು ಮಾತು ಹಾಗೂ ನಿಷ್ಠೂರ ಬರವಣಿಗೆಗೆ ಹೆಸರಾಗಿದ್ದರು. ಹಳ್ಳಿಗಳಲ್ಲಿನ ಸ್ವಚ್ಛ ಗಾಳಿ ಮತ್ತು ಬೆಳಕು ನಗರಗಳಲ್ಲೂ ಇರಬೇಕು. ಅಂತೆಯೇ, ನಗರಗಳಲ್ಲಿ ಲಭಿಸುವ ಎಲ್ಲಾ ಸೌಲಭ್ಯಗಳೂ ಹಳ್ಳಿಗಳಲ್ಲೂ ದೊರೆಯಬೇಕು ಎಂಬ ಅವರ ಮಾತುಗಳಲ್ಲಿ ಗ್ರಾಮೀಣಾಭಿವೃದ್ಧಿಯ ಕಳಕಳಿ ಹಾಗೂ ಕಾಳಜಿ ವ್ಯಕ್ತವಾಗುತ್ತಿತ್ತು.

ಮಾಜಿ ಪ್ರಧಾನಿಗಳಾದ ರಾಜೀವ್‌ಗಾಂಧಿ, ವಿ. ಪಿ. ಸಿಂಗ್, ಚಂದ್ರಶೇಖರ್ ಹಾಗೂ ಪಿ ವಿ ನರಸಿಂಹರಾವ್ ಅವರಿಗೆ ಮಾಧ್ಯಮ ಸಲಹೆಗಾರರಾಗಿದ್ದ ಪ್ರೆಸ್ ಇನ್‌ಫಾರ್ಮೇಷನ್ ಬ್ಯೂರೋದ ಪ್ರಧಾನ ವಾರ್ತಾಧಿಕಾರಿ ರಾಮಮೋಹನ್ ರಾವ್ ಅವರೂ ಕೂಡಾ ಬರವಣಿಗೆಯ ಜೊತೆಗೆ ವಿನಯವಂತಿಕೆಗೆ ಹೆಸರಾಗಿದ್ದರು. ಇಂಡೋ-ಪಾಕ್ ಯುದ್ಧ ವರದಿಗಾರಿಕೆ ಮಾಡಿದ ಹೆಗ್ಗಳಿಕೆಯೂ ಅವರದಾಗಿತ್ತು. ಕರ್ನಾಟಕ ಮಾಧ್ಯಮ ಲೋಕದ ಇಬ್ಬರು ದಿಗ್ಗಜರು ಒಂದೇ ದಿನ ನಮ್ಮನ್ನಗಲಿರುವುದು ನನ್ನ ದುಃಖ ಇಮ್ಮಡಿಯಾಗಿದೆ.

ಈ ಇಬ್ಬರು ಮಹನೀಯರ ಆತ್ಮಕ್ಕೂ ಚಿರಶಾಂತಿ ದೊರೆಯಲಿ. ಈ ಹಿರಿಯ ಚೇತನಗಳ ಅಗಲಿಕೆಯಿಂದ ಉಂಟಾದ ದುಃಖ ಭರಿಸುವ ಶಕ್ತಿಯನ್ನು ಈ ಎರಡೂ ಕುಟುಂಬಗಳಿಗೆ ಕರುಣಿಸಲಿ ಎಂದು ಮುಖ್ಯಮಂತ್ರಿ ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ.

*********

ಡಿ ಪಿ ಎಂ